# INTERNATIONAL INDIAN SCHOOL, DAMMAM

**FIRST TERM EXAM - JULY - 2017 -18** **MAX. MARKS: 80**

**CLASS VII** **THIRD LANGUAGE – KANNADA** **TIME : 3 Hrs.**

GENERAL INSTRUCTIONS:

1. Read all questions carefully before answering.
2. All questions must be numbered correctly as in the question paper.

---

1. **ಸರಿಯಾದ ಪದವನ್ನು ಆರಿಸಿ ಖಾಲಿ ಸ್ಥಳವನ್ನು ತುಂಬಿಸಿರಿ: [ 1 X 10 = 10 ]**

೧. ಸೊಂಪನು ಕಂಪನು ಪಡೆಯಲಿ ____________ನು [ ಪಂಪ , ರಂಪ, ತಂಪ ]

೨. ಭೂಮಿಗೆ ಮರಗಳು ದೇವರ ____________ಗಳು. [ ಬರ, ವರ, ಸರ ]

೩. ______________ ಕನ್ನಡ ದಿಂಡಿಮವ, ಓ ಕರ್ನಾಟಕ ಹೃದಯಶಿವ. [ ಬಾರಿಸು, ಹಾರಿಸು, ಏರಿಸು ]

೪. ಶ್ರೀ ಕುವೆಂಪುರವರು ___________ ವರ್ಷಗಳ ಕಾಲ ಬಾಳಿದರು. [ ೬೦, ೭೦, ೯೦ ]

೫. ________ ನೀರು ಹನಿಸುವಾಗ. [ ಅಣ್ಣ, ಸುಣ್ಣ, ಬಣ್ಣ ]

೬. _____________ ಬಂದನು. [ ಮೂಡಿ, ಮೋಡಿ, ಮಾಡಿ ]

೭. ಕತ್ತಲೊಡನೆ ___________ ಯು ಕದನ ಮಾಡುತ್ತಾನೆ. [ ಮೋಡ, ರವಿ, ಚಂದ್ರ ]

೮. ____________ ಎನೆ ಕುಣಿದಾಡುವುದೆನ್ನದೆ [ ಕನ್ನಡ, ಮರಾಠಿ, ತೆಲುಗು ]

೯. ಅರಮನೆ ಆವರಣದಲ್ಲಿ ____________ ನು ಪಟ್ಟದ ಆನೆಯನ್ನು ಮೈ ತೊಳೆಯಲು ಹೊರಟಿದ್ದನು. [ ಮಾವಟಿಗ, ಅಕ್ಬರ್ , ಬೀರಬಲ್ ]

೧೦. ಅದು ತುಂಬಾ ____________________. [ ಸುಂದರ, ಹಠಮಾರಿ, ಕಿರಿಕಿರಿ ]

2. **ಅ) ಈ ಕೆಳಗಿನ ಎಂಟು ಪದಗಳ ಅರ್ಥ ಬರೆಯಿರಿ: [ ½ X 8 = 4 ]**

೧. ಬಾನು ೨. ತುಂಬಿ ೩. ರವಿ ೪. ಉತ್ತಮೋತ್ತಮ ೫. ಲಭಿಸಿವೆ

೬. ರಚ್ಚೆ ೭. ತಾಳ್ಮೆ ೮. ಕಂಪು ೯. ಆರೈಕೆ ೧೦. ಬಸಿರು

**ಆ) ಈ ಕೆಳಗಿನ ಎಂಟು ಪದಗಳ ವಿರುದ್ಧ ಪದ ಬರೆಯಿರಿ: [ ½ X 8 = 4 ]**

೧. ಹಿರಿಯರು ೨. ಕೀರ್ತಿ ೩. ಪ್ರಾರಂಭ ೪. ಅರಳಿತು ೫. ವಿಶ್ವಾಸ

೬. ಜೋರಾಗಿ ೭. ಸುಲಭ ೮. ಅಶಿಸ್ತು ೯. ಜಾಣತನ ೧೦. ಅಳು

**ಇ) ಈ ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ತುಂಬಿಸಿರಿ : [ ½ X 4 = 2 ]**

೧. __ ___ ನಾಮ ೨. ಕರ್ನಾ __ ___ ೩. ___ ___ ಯಣ ೪. __ ___ ನಾಡು

ಈ ) ಇವುಗಳನ್ನು ಹೊಂದಿಸಿ ಬರೆಯಿರಿ: [ ½ X 10 = 5 ]

| | |
|---|---|
| ೧. ಅಮ್ಮ ಹಾಲು | ಚಕ್ರವರ್ತಿ |
| ೨. ಹೂವ ಹುಡಿಯು | ನೆಡುವ |
| ೩. ಗಿಡ | ಸ್ಮರಣೆ |
| ೪. ಹಿರಿಯರ | ೧೯೦೪ |
| ೫. ಜ್ಞಾನಪೀಠ | ಬೀಗಿದ |
| ೬ .ಕುವೆಂಪು | ನಿಜವಾಯಿತು |
| ೭. ಮಾತೇ | ಬೇಗನೆ ತನ್ನಿರಿ |
| ೮. ಅಕ್ಬರ್ | ಹಾರುವಾಗ |
| ೯. ಗೆಳೆಯರೆ ಬನ್ನಿರಿ | ಪ್ರಶಸ್ತಿ |
| ೧೦. ಹೆಮ್ಮೆಯಿಂದ | ಹಿಂಡುವಾಗ |

ಉ) ಈ ಪದಗಳನ್ನು ಜೋಡಿಸಿ ಬರೆಯಿರಿ: [ ½ X 4 = 2 ]

೧. ಬರೆ + ಇಸು = ________________ ೨. ಅಳು + ಇಸು = ________________

೩. ನಗು + ಇಸು = ________________ ೪. ಹಾಡು + ಇಸು = ________________

3. ಅ) ಈ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ: (Any 4 ) [ 1 X 4 = 4 ]

೧. ಹುಡಿ ೨. ಭಾನು ೩. ಭೂಮಿ ೪. ಗೆಳೆಯರು ೫. ಮರ

ಆ) ಈ ಮಾತನ್ನು ಯಾರು ಯಾರಿಗೆ ಹೇಳಿದರು? [ 1 X 2 = 2 ]

೧. "ಓಹೋ! ಈ ಬಟ್ಟಲು ಬೇಕೇ? ತೆಗೆದುಕೋ".

೨. " ಕಳ್ಳನಿಗೊಂದು ಪಿಳ್ಳೇ ನೆವ".

ಇ) ಈ ಕೆಳಗಿನವುಗಳನ್ನು ಹೆಸರಿಸಿರಿ: [ 1 X 3 = 3 ]

೧. ಹಾಡು ಹೇಳುವವನು ________________

೨. ವಾಹನ ನಡೆಸುವವನು ________________

೩. ಬೆಳೆ ಬೆಳೆಯುವವನು ________________

ಈ) ಸ್ವಂತ ವಾಕ್ಯದಲ್ಲಿ ಎರಡು ಪದಗಳನ್ನು ಬಳಸಿ : ( Any two ) [ 1 X 2 = 2 ]

೧. ಮೊಸರು ೨. ಬಂಗಾರ ೩. ಉಪಾಯ

**ಉ) ಬಿಟ್ಟ ಸ್ಥಳ ತುಂಬಿಸಿ: [ 1 X 5 = 5 ]**

೧. ಕರ್ನಾಟಕದ ಮುಖ್ಯಮಂತ್ರಿ ________________________.

೨. ಅಕ್ಬರನು ಅರಮನೆಯಲ್ಲಿದ್ದ ಆಟದ ____________________ ಗಳನ್ನು ಮಗುವಿನ ಮುಂದೆ ಸುರಿದನು.

೩. ಕುವೆಂಪುರವರು ಉನ್ನತ ವ್ಯಾಸಂಗವನ್ನು ______________ ನಲ್ಲಿ ಪಡೆದರು.

೪. ಕರ್ನಾಟಕದ ನಾಡಗೀತೆ ______________________________.

೫. ಬೀರಬಲ್ಲನು ದಿನವೂ __________________ ಗೆ ತಡವಾಗಿ ಬರುತ್ತಿದ್ದನು

**4. ಅ) ಕೆಳಗಿನ ಎಂಟು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: [ 1 X 8 = 8 ]**

೧. ಗೆಳೆಯರು ಗಿಡಗಳ ಆರೈಕೆ ಹೇಗೆ ಮಾಡುತ್ತಾರೆ?

೨. ಗೆಳೆಯರು ಏನನ್ನು ತರುತ್ತಾರೆ?

೩. ಅಕ್ಬರನು ಯಾವ ಕಾರಣವನ್ನು ನಂಬಲಿಲ್ಲ?

೪. ಬೀರಬಲ್ಲನಿಗೆ ಏನು ತಿಳಿದಿತ್ತು?

೫. ರವಿಯು ಹೇಗೆ ಮೂಡುತ್ತಾನೆ?

೬. ರವಿಯು ಯಾರೊಡನೆ ಆಟವಾಡುತ್ತಾನೆ?

೭. ಕುವೆಂಪು ಅವರಿಗೆ ಯಾವ ವಿಶ್ವ ವಿದ್ಯಾನಿಲಯಗಳು ಡಿ.ಲಿಟ್. ಪದವಿ ನೀಡಿವೆ?

೮. ಕುವೆಂಪು ಅವರ ಮೇರುಕೃತಿ ಯಾವುದು?

೯. ಕುವೆಂಪು ಅವರ ಪೂರ್ಣ ಹೆಸರೇನು?

೧೦. ರವಿಯು ಮೂಡಿ ಬಂದನು ಪದ್ಯ ಬರೆದ ಕವಿ ಯಾರು?

**5.ಅ) ಈ ಪದ್ಯಭಾಗ ಪೂರ್ತಿಗೊಳಿಸಿರಿ: [ 3 marks ]**

ಗೊಬ್ಬರ ______________ __________ ________________

______________ ________________

____________ _____________ _________ ______________

_______________ ಎತ್ತರಕ್ಕೆ

ಈ ಪದ್ಯ ಬರೆದ ಕವಿ __________________________________

**ಆ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯ ಗಳಲ್ಲಿ ಉತ್ತರಿಸಿರಿ: [ 2 ½ X 4 = 10 ]**

೧. ಕುವೆಂಪು ಅವರಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಲಭಿಸಿದ ಪ್ರಶಸ್ತಿಗಳ ಬಗ್ಗೆ ಬರೆಯಿರಿ:

೨. ಕಡೆಗೆ ಬೀರಬಲ್ಲನು ಮಗುವನ್ನು ಹೇಗೆ ಸಮಾಧಾನ ಪಡಿಸಿದನು?

೩. ಕುವೆಂಪು ಅವರ ಹೆಸರಾಂತ ಕೃತಿಗಳ ಬಗ್ಗೆ ಬರೆಯಿರಿ.

೪. ಕುವೆಂಪು ಹುಟ್ಟಿದ ಸ್ಥಳ ಮತ್ತು ಕಾಲದ ಬಗ್ಗೆ ತಿಳಿಸಿರಿ.

೫. ಅಕ್ಬರ್ - ಬೀರಬಲ್ಲರ ಸಂಬಂಧ ಹೇಗಿತ್ತು?

**6. ಅ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: [ 1 X 4 = 4 ]**

1) 60    2) 46    3) 28    4) 57

ಆ) ಮಾದರಿಯಂತೆ ಬರೆಯಿರಿ: [ ½ X 4 = 2 ]

[ ಮಾದರಿ -- ಓದುವ - ಓದೋಣ ]

೧. ನೋಡುವ - ____________ ೨. ಮಾಡುವ - ___________

೩. ಹಣಿಸುವ - ______________ ೪. ಮುಚ್ಚುವ - _____________

**7. ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ: [ 10 marks ]**

ಒಲಂಪಿಕ್ ಕ್ರೀಡೆಗಳ ಪರಿಚಯ ಎಲ್ಲಾ ದೇಶಗಳಿಗೂ ಇದೆ. ಏಕೆಂದರೆ ಆ ಕ್ರೀಡೆಗಳು ವಿಶ್ವ ಮಟ್ಟದಲ್ಲಿ ನಡೆಯುತ್ತವೆ. ಅದರಲ್ಲಿ ವಿಶ್ವದ ನೂರಾರು ದೇಶಗಳ ಕ್ರೀಡಾಪಟುಗಳು ಭಾಗವಹಿಸುತ್ತಾರೆ. ಒಲಂಪಿಕ್ ಕ್ರೀಡಾಕೂಟಗಳು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತವೆ. ಈ ಕ್ರೀಡಾಕೂಟಗಳನ್ನು ಪ್ರತಿ ಬಾರಿಯೂ ಒಂದೊಂದು ದೇಶದಲ್ಲಿ ಏರ್ಪಡಿಸುತ್ತಾರೆ. ಕ್ರೀಡಾಸ್ಪರ್ಧೆಗಳು ೧೫ ದಿನಗಳ ಕಾಲ ನಿರಂತರವಾಗಿ ನಡೆಯುತ್ತವೆ. ಸ್ಪರ್ಧೆಗಳಲ್ಲಿ ಸಾವಿರಾರು ಮಂದಿ ಕ್ರೀಡಾಪಟುಗಳು ಸಮಾವೇಶಗೊಳ್ಳುತ್ತಾರೆ.

ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಚಿನ್ನದ ಪದಕವನ್ನು ನೀಡುತ್ತಾರೆ. ದ್ವಿತೀಯ ಸ್ಥಾನ ಪದೆದವರಿಗೆ ಬೆಳ್ಳಿಯ ಪದಕ ಮತ್ತು ತೃತೀಯ ಸ್ಥಾನ ಪಡೆದವರಿಗೆ ಕಂಚಿನ ಪದಕವನ್ನು ನೀಡುತ್ತಾರೆ.

ಕ್ರೀಡಾಸ್ಪರ್ಧೆಗಳಲ್ಲಿ ಯಾವ ದೇಶದ ಕ್ರೀಡಾಪಟುಗಳು ಬೇಕಾದರೂ ಭಾಗವಹಿಸಬಹುದು. ಆದರೆ ಅವರು ಹವ್ಯಾಸಿ ಕ್ರೀಡಾಪಟುಗಳಾಗಿರಬೇಕು ಎಂಬ ನಿಯಮವಿದೆ. ವೆಯಕ್ತಿಕ ಕ್ರೀಡಾಸ್ಪರ್ಧೆಯಲ್ಲಿ ಮೂವರು ಮಾತ್ರ ಪಾಲ್ಗೊಳ್ಳಬಹುದು ಎಂಬ ನಿಯಮವೂ ಇದೆ.

ಒಲಂಪಿಕ್ ಕ್ರೀಡಾಸ್ಪರ್ಧೆಗಳು ಮೊದಲು ಆರಂಭಗೊಂಡಿದ್ದು ಗ್ರೀಸ್ ದೇಶದಲ್ಲಿ. ಈ ಕ್ರೀಡಾಸ್ಪರ್ಧೆಗಳಿಗೆ ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸವಿದೆ. ಹಿಂದೆ ಗ್ರೀಸ್ ದೇಶದಲ್ಲಿ ಒಲಂಪಿಯಾ ಎಂಬ ಒಂದು ನಗರವಿತ್ತು.ಅದು ಧಾರ್ಮಿಕ ಕಾರ್ಯಕ್ರಮಗಳಿಗೆ ಪ್ರಸಿದ್ಧಿ ಪಡೆದ ಪವಿತ್ರ ನಗರವಾಗಿತ್ತು. ಅಲ್ಲಿ ನಾಲ್ಕು ವರ್ಷಗಳಿಗೊಮ್ಮೆ ಒಂದು ದೊಡ್ಡ ಧಾರ್ಮಿಕ ಉತ್ಸವ ನಡೆಯುತ್ತಿತ್ತು. ಅಲ್ಲಿಯ ಜನ ಧಾರ್ಮಿಕ ಉತ್ಸವದ ಅಂಗವಾಗಿ ಕೆಲವು ಕ್ರೀಡಾಸ್ಪರ್ಧೆಗಳನ್ನು ನಡೆಸುವುದು ವಾಡಿಕೆಯಾಗಿತ್ತು.

ಪ್ರಶ್ನೆಗಳು:

೧. ಒಲಂಪಿಕ್ ಕ್ರೀಡೆಗಳು ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತವೆ?

೨. ಒಲಂಪಿಕ್ ಕ್ರೀಡೆಗಳು ____________ ದಲ್ಲಿ ನಡೆಯುತ್ತವೆ.

೩. ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ಯಾವ ಪದಕವನ್ನು ನೀಡುತ್ತಾರೆ?

೪. ಈ ಕ್ರೀಡಾಸ್ಪರ್ಧೆಗಳಿಗೆ ಸುಮಾರು _________________ ವರ್ಷಗಳ ಇತಿಹಾಸವಿದೆ.

೫. ಕ್ರೀಡಾಸ್ಪರ್ಧೆಗಳು ಎಷ್ಟು ದಿನಗಳ ಕಾಲ ನಡೆಯುತ್ತವೆ?

೬. ವೈಯಕ್ತಿಕ ಕ್ರೀಡಾಸ್ಪರ್ಧೆಯಲ್ಲಿ ________________ ಮಾತ್ರ ಪಾಲ್ಗೊಳ್ಳಬಹುದು .

೭. ಒಲಂಪಿಕ್ ಕ್ರೀಡಾಸ್ಪರ್ಧೆಗಳು ಮೊದಲು ಆರಂಭಗೊಂಡಿದ್ದು ಯಾವ ದೇಶದಲ್ಲಿ?

೮. ಗ್ರೀಸ್ ದೇಶದಲ್ಲಿ _________________ ಎಂಬ ಒಂದು ನಗರವಿತ್ತು.

೯. ದ್ವಿತೀಯ ಸ್ಥಾನ ಪಡೆದವರಿಗೆ ____________ ಪದಕ ಮತ್ತು ತೃತೀಯ ಸ್ಥಾನ ಪಡೆದವರಿಗೆ __________ ಪದಕವನ್ನು ನೀಡುತ್ತಾರೆ.

XXXXXXXXXXXXXXXXXXXX